ಒಟ್ಟಾರೆ ಸುಖಪ್ರಸವ ಆದರೆ ಸಾಕು.. ನಾನು ದೇವರಲ್ಲಿ ಅಷ್ಟೇ ಬೇಡಿಕೊಳ್ಳೋದು'' ಎಂದರು ಗೌರಿಯಮ್ಮ.

''ಎಲ್ಲ ಸರಿ ಹೋಗ್ತದೆ. ಅಮ್ಮ ಚಿಂತೆ ಮಾಡಬೇಡ. ಅವರ ಗೆಳೆಯನಿಗೆ ಹೇಳಿ ನಾಳೆ ಪಾಸ್‌ಪೋರ್ಟ್‌ಗೆ ಅರ್ಜಿ ಹಾಕಿಸುತ್ತಾರೆ. ಇಲ್ಲಿಂದ ವೀಸಾ ಮಾಡಿಸುತ್ತಾರೆ. ಇನ್ನು ಮೂರು ನಾಲ್ಕು ವಾರದಲ್ಲಿ ಹೊರಟು ಬರಲು ತಯಾರಿ ಮಾಡಿಕೋ, ಅಷ್ಟೆ'' ಧೈರ್ಯ ತುಂಬಿದಳು ಮಗಳು.

''ತಯಾರಿ ಎಲ್ಲ ಆಗಿದೆ. ಬಟ್ಟೆ ಬರೆ, ಬಾಣಂತಿಮದ್ದಿನ ಸಾಮಗ್ರಿ ಎಲ್ಲ ತಂದಿಟ್ಟಿದ್ದೇನೆ. ಇನ್ನು ನಾವು ಅಲ್ಲಿಗೆ ಬರೋದಾದ್ರೆ ದನಕರುಗಳನ್ನು ಯಾರ ಹಟ್ಟಿಯಲ್ಲಿ ಕಟ್ಟುವುದು ಎಂದು ಆಲೋಚಿಸಬೇಕು ಅಷ್ಟೆ. ಯಾವುದಕ್ಕೂ ನಿಮ್ಮಪ್ಪ ಏನು ಹೇಳ್ತಾರೆ ನೋಡೋಣ'' ಎಂದರು ಗೌರಿಯಮ್ಮ.

''ಸರಿ ಹಾಗಿದ್ರೆ'' ಅಂದಳು ಮಗಳು.

ಗಂಡ ಬರುತ್ತಲೇ ಮಗಳ ಮಾತುಗಳ ವರದಿಯೊಪ್ಪಿಸಿದರು ಗೌರಿಯಮ್ಮ.

''ಹಾಗಾದ್ರೆ ಹಾಗೆ. ಇಲ್ಲಿಯ ಆಸ್ಪತ್ರೆಯ ಸಮಸ್ಯೆ ನಿಜ ಅಲ್ವೇ? ಮತ್ತೆ, ಬೆಂಗಳೂರನ್ನೂ ನೋಡದ ನಿನಗೆ ದುಬೈ ದರ್ಶನಭಾಗ್ಯ ಕರುಣಿಸುತ್ತಾನೆ ಅಂತಾದರೆ ನಾನ್ಯಾಕೆ ಅಡ್ಡ ಬರುತ್ತೇನೆ? ಹೋಗಿಬಾ...'' ಅಂದರು ಮೂರ್ತಿ.

''ಮಗಳು ಇಬ್ರೂ ಬನ್ನಿ ಅಂದದ್ದು'' ನೆನಪಿಸಿದರು ಗೌರಿಯಮ್ಮ.

''ಅದು ಸರಿ. ಆದರೆ ಮನೆ, ತೋಟ, ದನಕರು ಎಲ್ಲ ಬಿಟ್ಟು ತಿಂಗಳುಕಟ್ಟಲೆ ಹೇಗೆ ನಾನೂ ಬರುವುದು? ನೀನು ಹೋಗಿ ಬಾ... ಬಾಣಂತನದಲ್ಲಿ ನನಗೇನೂ ಡ್ಯೂಟಿ ಇಲ್ಲವಲ್ಲ'' ನಕ್ಕರು ಮೂರ್ತಿ.

''ಮನೆ ತೋಟ ನೋಡ್ಕೊಳ್ಳೋಕೆ ಗಿರಿಯನಿಲ್ವಾ? ದನಕರು ಎಲ್ಲಾದ್ರೂ ಬೇರೆ ಕಟ್ಟಿದ್ರೆ ಆಯ್ತು. ಗಿರಿಯನಿಗೆ ಚಾಪೆಹಿಡಿದ ತಾಯಿ, ಹಟ್ಟಿ ಬೇರೆ ಇಲ್ಲ. ದನಕರು ಮಾತ್ರ ಅವರಲ್ಲಿ ಕಟ್ಟಬಹುದಾಂತ ನಾಳೆ ನಿಮ್ಮ ಅಕ್ಕನನ್ನು ಕೇಳಿ. ಜೀವನದಲ್ಲಿ ಒಂದು ಬಾರಿ ಹೀಗೆ ಹೋಗುವುದು, ನೀವು ಬರುವುದಿಲ್ಲವಾದರೆ ನಾನೂ ಹೋಗುವುದಿಲ್ಲ'' ಗೌರಿಯಮ್ಮ ಪಟ್ಟು ಹಿಡಿದರು.

''ನೋಡೋಣ ನಾಳೆ'' ಎಂದು ಹೇಳಿ ಮಾತುಕತೆಗೆ ವಿರಾಮ ಹಾಕಿದರಾದರೂ ಮೂರ್ತಿಯವರ ತಲೆಯೆಲ್ಲ ದುಬೈ ತುಂಬಿ ಹೋಗಿತ್ತು. ಗೌರಿಯಮ್ಮನನ್ನು ಕರೆದುಕೊಂಡು ಎಲ್ಲಿಗೂ ಹೋದದ್ದೇ ಇಲ್ಲ. ಹೀಗೊಂದು ಅವಕಾಶ ಬರುವಾಗಲಾದರೂ ಮನಸ್ಸು ಮಾಡದೇ ಇದ್ದರೆ ಹೇಗೆ ಎಂದುಕೊಂಡರಾತ.

★★★

ಅಕ್ಕನ ಮನೆ ಅಲ್ಲೇ ಹತ್ತಿರದಲ್ಲಿ ಇತ್ತು. ಮೂರ್ತಿ ಬೆಳಗ್ಗೇನೆ ಬಂದಿದ್ದರು. ''ಒಂದು ಒಂದೂವರೆ ತಿಂಗಳಾ? ಗಬ್ಬದ ದನ ಅನ್ನುತ್ತಿದ್ದೀಯ ಬೇರೆ... ನನಗೆ ಎಡದಕಾಲು ನೆಲಕ್ಕೆ ಊರಲಾಗುತ್ತಿಲ್ಲ. ನಿನಗೆ ಗೊತ್ತಲ್ಲ... ಸೊಸೆಗೆ ಬೆಳಗ್ಗೆ ಬೇಗ ಹೋಗಬೇಕು. ಬ್ರೇಕ್‌ಫಾಸ್ಟಿಗೂ ಟೈಮಿಲ್ಲ. ಮಗ ನಾನು ಏಳುವ ಮುಂಚೆ ಹೋಗ್ತಾನೆ, ನಾನು ಮಲಗಿದಮೇಲೆಯೇ ಬರುವುದು. ಕೆಲವೊಮ್ಮೆ ರಾತ್ರಿಯಿಡೀ ದೀಪ ಹಾಕಿ ಏನೋ ಬರೀತಾನೆ. ಇಡೀ ಪ್ರಪಂಚವೇ ಆತನ ತಲೆಮೇಲೆ ತಿರುಗುತ್ತಿದೆಯೇನೋ... ಯಾವಾಗ್ಲೂ ಟೆನ್ಶನ್ ಆತನಿಗೆ. ಇದೆಲ್ಲದರ ನಡುವೆ ದನಕರು ಬೇಡ ಮಹರಾಯ. ನಮ್ಮ ಹಟ್ಟಿಕೊಟ್ಟಿಗೆ ಪಾಳುಬಿದ್ದು ಆರು ವರ್ಷವಾಯಿತು. ಆದರೂ ಮೂರುಬಾರಿ ರಾತ್ರಿ ಯಾರೋ ಬಂದು ಇಣುಕಿ ಹೋಗಿದ್ದಾರೆ. ಗಬ್ಬದ ದನ ಅಂದರೆ ಕನಿಷ್ಠ ಮೂವತ್ತೆಂಟು ನಲುವತ್ತು ಸಾವಿರ ಬೆಲೆಬಾಳುವಂತಾದ್ದು. ಊರಿಡೀ ಜಾನುವಾರು ಕಳ್ಳರದ್ದೇ ಕಾರುಬಾರು. ಇವೆಲ್ಲ ಕಾರಣಗಳಿಗೆ ನಾನು ಬೇಡ ಅಂದದ್ದು. ಕೈಕಾಲಾದ್ರೂ ಸರಿಯಿದ್ದರೆ ನೀನು ಹೇಳಿ ಮುಗಿಸುವ ಮೊದಲೇ ನಾನು